**ನಿವಾಸಿ ವಿದೇಶಿ ಕರೆನ್ಸಿ (ದೇಶೀಯ) ಖಾತೆ-ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯಗಳು**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 53 (ನವೆಂಬರ್ 23, 2002)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ,**
**ಮುಂಬೈ-400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ-53 ನವೆಂಬರ್ 23, 2002

ಗೆ,

ವಿದೇಶಿ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳಿಗೆ
ಮಾನ್ಯರೇ

**ನಿವಾಸಿ ವಿದೇಶಿ ಕರೆನ್ಸಿ (ದೇಶೀಯ) ಖಾತೆ-**
**ನಿವಾಸಿ ವ್ಯಕ್ತಿಗಳಿಗೆ ಸೌಲಭ್ಯಗಳು**

ನವೆಂಬರ್ 1, 2002 ನೇ ದಿನಾಂಕದ ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 37ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ. ಅದರ ಅನ್ವಯ, ಸರ್ಕಾರದಿಂದ ಅಧಿಸೂಚನೆ ಪ್ರಕಟಗೊಳ್ಳುವ ನಿರೀಕ್ಷೆಯಲ್ಲಿ, ನಿವಾಸಿ ವಿದೇಶೀ ಹಣ (ದೇಶೀಯ) ಖಾತೆಗಳನ್ನು ತೆರೆಯುವುದಕ್ಕಾಗಿ ತಮಗೆ ಸಲ್ಲಿಸಲಾದ ಮನವಿಗಳನ್ನು ಅವರು ತಮ್ಮ ಶಿಫಾರಸುಗಳೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗೆ ರವಾನಿಸಬೇಕಾಗುತ್ತದೆ.

2. ಕರೆನ್ಸಿ ನೋಟುಗಳು, ಬ್ಯಾಂಕ್ ನೋಟುಗಳು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ ಗಳಿಸಿದ ವಿದೇಶೀ ವಿನಿಮಯದಿಂದ ನಿವಾಸಿ ವಿದೇಶಿ ಕರೆನ್ಸಿ (ದೇಶೀಯ) ಖಾತೆ ಎಂಬ ಒಂದು ವಿದೇಶಿ ಕರೆನ್ಸಿ ಖಾತೆಯನ್ನು ಭಾರತದಲ್ಲಿನ ಅಧಿಕೃತ ವ್ಯಾಪಾರಿಯ ಬಳಿ ತೆರೆಯಲು, ಹೊಂದಿರಲು ಮತ್ತು ನಿರ್ವಹಿಸಲು ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಗೆ ನೀಡುವ ಅದರ ಅಧಿಸೂಚನೆ ಸಂಖ್ಯೆ. ಎಫ್‌ಇಎಂಎ 10/2000-ಆರ್‌ಬಿ ದಿನಾಂಕ ಮೇ 3, 2000 ಇದನ್ನು ತಿದ್ದುಪಡಿ ಮಾಡಿ ಭಾರತೀಯ ರಿಸರ್ವ್ ಬ್ಯಾಂಕ್ ನವೆಂಬರ್ 01, 2002 ನೇ ದಿನಾಂಕದ ತನ್ನ ಎಫ್‌ಇಎಂಎ.74/2002-ಆರ್‌ಬಿ ಸಂಖ್ಯೆಯ ಅಧಿಸೂಚನೆಯನ್ನು ಹೊರಡಿಸಿದೆ.

3. ಅದರಂತೆ, ಮೇಲೆ ಉಲ್ಲೇಖಿಸಿದ ಅಧಿಸೂಚನೆ ಮತ್ತು ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ-37ರಲ್ಲಿ ಗೊತ್ತುಪಡಿಸಿರುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸುವುದಕ್ಕೆ ಒಳಪಟ್ಟು ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಗಾಗಿ ಅಧಿಕೃತ ವ್ಯಾಪಾರಿಗಳು ಅಂಥ ಒಂದು ಖಾತೆಯನ್ನು ತೆರೆಯುವುದು, ಹೊಂದಿರುವುದು ಮತ್ತು ನಿರ್ವಹಿಸುವುದು ಕ್ರಮಬದ್ಧವಾಗಿರುತ್ತದೆ.

4. ನವೆಂಬರ್ 1, 2002 ನೇ ದಿನಾಂಕದ ಎಫ್‌ಇಎಂಎ.74/2002–ಆರ್‌ಬಿ ಸಂಖ್ಯೆಯ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ಮೇ 3, 2000 ನೇ ದಿನಾಂಕದ ಎಫ್‌ಇಎಂಎ.10/2000–ಆರ್‌ಬಿ ಸಂಖ್ಯೆಯ ಅಧಿಸೂಚನೆಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡತಕ್ಕದ್ದು.

5. ಅಧಿಕೃತ ವ್ಯಾಪಾರಿಗಳು ಸುತ್ತೋಲೆಯ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

6. ಈ ಸುತ್ತೋಲೆಯಲ್ಲಿ ಅಡಕವಾಗಿರುವ ನಿರ್ದೇಶನಗಳನ್ನು ವಿದೇಶಿ ವಿನಿಮಯ ನಿರ್ವಹಣಾ ಅಧಿನಿಯಮ, 1999 (1999ರ 42) ರ ಪ್ರಕರಣ 10(4) ಮತ್ತು ಪ್ರಕರಣ 11(1)ರ ಮೇರೆಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ,
ಗ್ರೇಸ್ ಕೋಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕರು.